<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 31825-2018

ಸಿಡಬ್ಲೂ -6 ಪಿಡಬ್ಲೂ-1

| | |
|---|---|
| ಸಾಕ್ಷಿದಾರರ ಹೆಸರು | : ಧನಪಾಲ್ |
| ತಂದೆಯ ಹೆಸರು | : ಎನ್ ಸುಬ್ರಮಣ್ಯ |
| ವಯಸ್ಸು | : 72 ವರ್ಷ |
| ಕೆಲಸ | : ವಿಶ್ರಾಂತ ಜೀವನ |
| ವಾಸ | : ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 26-03-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ಚಾಸಾ 1 ನನ್ನ ಹೆಂಡತಿ, ಚಾಸಾ 4 ನನ್ನ ಸೊಸೆ, ಚಾಸಾ 5 ನನ್ನ ಮಗ. ಆರೋಪಿ ನನಗೆ ಗೊತ್ತಿಲ್ಲ, ಆದರೆ ಗಲಾಟೆ ಮಾಡಿದ್ದರು.

2015-2016 ನೇ ಇಸವಿಯಲ್ಲಿ ಒಂದು ದಿನ ನಮ್ಮ ಮನೆಯಲ್ಲಿ ಚಾಸಾ 1, 4 ಮತ್ತು ನನ್ನ ಮಗಳು ಮಹೇಶ್ವರಿ ಮಾತ್ರ ಇದ್ದರು. ಆ ಸಮಯದಲ್ಲಿ ಆರೋಪಿಯು ನಮ್ಮ ಮನೆಯ ಒಳಗೆ ಬಂದು ಇದು ನನ್ನ ಮನೆ, ನೀವೆಲ್ಲಾ ಮನೆ ಬಿಟ್ಟು ಹೊರಗೆ ಹೋಗಿ ಎಂದು ಅವರ ಮೇಲೆ ಗಲಾಟೆ ಮಾಡಿರುತ್ತಾರೆ. ಆ ಸಮಯದಲ್ಲಿ ಆರೋಪಿಯು ಕಲ್ಲಿನಿಂದ ನಮ್ಮ ಮನೆಯ ಕಿಟಕಿಯ ಗ್ಲಾಸುಗಳನ್ನು ಒಡೆದು ಹಾಕಿದ್ದರು. ನಂತರ ಚಾಸಾ 1, 4 ಮತ್ತು ನನ್ನ ಮಗಳು ನನಗೆ ಕರೆಯನ್ನು ಮಾಡಿ ವಿಚಾರವನ್ನು ತಿಳಿಸಿರುತ್ತಾರೆ. ನಂತರ ನಾನು ಬಂದು ಎಲ್ಲರೂ ಸೇರಿ ದೂರನ್ನು ಕೊಟ್ಟಿರುತ್ತೇವೆ. ಈ ಎಲ್ಲಾ ವಿಚಾರವನ್ನು ನಾನು ಪೋಲೀಸರ ಮುಂದೆ ಹೇಳಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ</u>

ಸದರಿ ಗಲಾಟೆಯ ಸಮಯದಲ್ಲಿ ಚಾಸಾ 4 ರವರು ಆರೋಪಿಯನ್ನು ಪ್ರಶ್ನೆ ಮಾಡಿದ್ದಕ್ಕೆ ಆರೋಪಿಯು ಚಾಸಾ 4 ರವರನ್ನು ಕುರಿತು ಸೂಳೇ ಮುಂಡೆ, ಬೋಳಿ ಮುಂಡೆ ಎಂದು ಬೈದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿಯು ಚಾಸಾ 1 ಮತ್ತು 4 ರವರಿಗೆ ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಈ ವಿಚಾರಗಳನ್ನು ಸಹ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ಗಲಾಟೆಯ ದಿ. 26-10-2017 ರಂದು ಮಧ್ಯಾನ್ನ 01.40 ಗಂಟೆಗೆ ನಡೆದಿರುತ್ತದೆ ಎಂದರೆ ಸರಿ. ಆ ದಿನ ಇಟ್ಟಿಗೆ ಚೂರುಗಳಿಂದ ಕಿಟಕಿಯ ಗ್ಲಾಸುಗಳನ್ನು ಒಡೆದು ಹಾಕಿದ್ದರು ಎಂದರೆ ಸರಿ.

ಪಾಟೀ ಸವಾಲು ಆರೋಪಿತರ ಪರ ಶ್ರೀಮತಿ. ಪಿ.ಎಂ.ಎಂ.ವಕೀಲರಿಂದಃ

ನಾನು ಈ ಘಟನೆ ನಡೆಯುವ ಸಮಯಕ್ಕೆ ಪ್ಯಾಬ್ರಿಕ್ ಕೆಲಸವನ್ನು ಮಾಡುತ್ತಿದ್ದೆ. ಈ ಘಟನೆ ನಡೆಯುವ ಸಮಯಕ್ಕೆ ನಾನು ಎಲ್ಲಿ ಇದ್ದೆ ಎಂದು ಈಗ ಹೇಳಲು ಆಗುವುದಿಲ್ಲ. ಆರೋಪಿಯನ್ನು ಅಲ್ತಾಫ್ ಎಂಬುವವರು ಕಳುಹಿಸಿ ಗಲಾಟೆ ಮಾಡಿಸಿದ್ದರು. ನನ್ನ ಹೆಂಡತಿ ಗೃಹಿಣಿ. ಚಾಸಾ 1 ರವರು ಸಿ.ಪಿ.ಎಂ ಪಕ್ಷದ ಕಾರ್ಯಕತ್ರರು ಎಂದರೆ ಸರಿಯಲ್ಲ. ಠಾಣೆ ನಮ್ಮ ಮನೆಯಿಂದ 5 ನಿಮಿಷ ಅಂತರದಲ್ಲಿ ಇರುತ್ತದೆ.

ಸದರಿ ಮನೆ ನಮ್ಮ ಮನೆ ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿರುತ್ತೇನೆ. ಸದರಿ ಮನೆಯ ಬಗ್ಗೆ ಒಂದು ಸಿವಿಲ್ ದಾವೆ ಇರುತ್ತದೆ ಎಂದರೆ ಸರಿ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ಯಾವುದೇ ಗಲಾಟೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆಯನ್ನು ನಾವು ಅಕ್ರಮವಾಗಿ ಸ್ವಾಧೀನ ಪಡೆಯಲು ಪ್ರಯತ್ನಿಸಿದ್ದು, ಅದನ್ನು ಪ್ರಶ್ನಿಸಿದಕ್ಕೆ ಈ ಒಂದು ಸುಳ್ಳು ಪ್ರಕರಣ ದಾಖಲು

ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ